# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 78 (737+606) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು)<br>ಮತ್ತು<br>ಶ್ರೀ ಪ್ರಕಾಶ್ ಕೆ. ರಾಥೋಡ್<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 19.09.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರು |

<table>
<tr><th>ಕ್ರಮ ಸಂಖ್ಯೆ:</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ವಾರ್ಷಿಕವಾಗಿ ಉತ್ಪಾದನೆಯಾಗುವ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ಪೌರಾಡಳಿತ ನಿರ್ದೇಶನಾಲಯವು ನೀಡಿರುವ ಮಾಹಿತಿಯಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿ ದಿನ ಸುಮಾರು 830.36 ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯವು ಉತ್ಪಾದನೆಯಾಗುತ್ತಿದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಯಾವ ದಿನಾಂಕದಿಂದ ಏಕಬಳಕೆಯ ಪ್ಲಾಸ್ಟಿಕ್ ನಿಷೇಧಿಸಲಾಗಿದೆ;</td><td>ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ. ಅಪಜೀ 17 ಇಪಿಸಿ 2012, ದಿನಾಂಕ:11.03.2016ರಲ್ಲಿ ಕೆಲವೊಂದು ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಬಳಕೆ, ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಿ ಆದೇಶವನ್ನು ಹೊರಡಿಸಿರುತ್ತದೆ.<br><br>ಮುಂದುವರೆದು, ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು (MoEF&CC) ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು, 2016ಕ್ಕೆ ತಿದ್ದುಪಡಿಯನ್ನು ತಂದು 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಕೆಲ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು ದೇಶ್ಯಾದ್ಯಂತ ನಿಷೇಧಿಸಿ ದಿನಾಂಕ: 12.08.2021ರಂದು ಅಧಿಸೂಚನೆಯನ್ನು ಹೊರಡಿಸಿರುತ್ತದೆ.</td></tr>
<tr><td>ಇ)</td><td>ನಿಷೇಧಿತ ಪ್ಲಾಸ್ಟಿಕ್ ವಸ್ತುಗಳು ಯಾವುವು: ಸದರಿ ಪ್ಲಾಸ್ಟಿಕ್ ಉತ್ಪಾದನೆ, ಮಾರಾಟ ಮತ್ತು ಬಳಕೆ ಮಾಡುವವರ ಮೇಲೆ ವಿಧಿಸಲಾಗುವ ದಂಡವೆಷ್ಟು; ಈ ಕಾನೂನು ಜಾರಿಗೆ ತಂದ ದಿನಾಂಕದಿಂದ ಇಲ್ಲಿಯವರೆಗೂ ವಸೂಲಿ ಮಾಡಿದ ದಂಡವೆಷ್ಟು;</td><td>ರಾಜ್ಯ ಸರ್ಕಾರದ ಮತ್ತು ಭಾರತ ಸರ್ಕಾರದ ಏಕ ಬಳಕೆ ಪ್ಲಾಸ್ಟಿಕ್ ನಿಷೇಧದ ವಿವರಗಳು ಈ ಕೆಳಕಂಡಂತಿವೆ.
<table>
<tr><th>ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ. ಅಪಜೀ 17 ಇಪಿಸಿ 2012, ದಿನಾಂಕ:11.03.2016 ರ ಪ್ರಕಾರ</th><th>ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, (MoEF&CC) ನವದೆಹಲಿ ದಿನಾಂಕ 12ನೇ ಆಗಸ್ಟ್, 2021ರ ಅಧಿಸೂಚನೆ (G.S.R.No. 571 (ಇ)) ಪ್ರಕಾರ</th></tr>
<tr><td>ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಪ್ಲಾಸ್ಟಿಕ್ ಭಿತ್ತಿ ಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್</td><td>(ಎ) ಪ್ಲಾಸ್ಟಿಕ್ ಸ್ಟಿಕ್‌ಗಳೊಂದಿಗೆ ಇಯರ್ ಬಡ್‌ಗಳು, ಬಲೂನ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಸ್ಟಿಕ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಕ್ಯಾಂಡಿ ಸ್ಟಿಕ್‌ಗಳು, ಐಸ್‌ಕ್ರೀಮ್ ಸ್ಟಿಕ್‌ಗಳು,</td></tr>
</table></td></tr>
</table>

<table>
<tr>
<td></td>
<td></td>
<td>
<table>
<tr>
<td>ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ಸ್ ಮತ್ತು ಊಟದ ಮೇಜಿನ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮಾಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ಬಳಕೆ, ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಿದೆ.</td>
<td>ಅಲಂಕಾರಕ್ಕಾಗಿ ಬಳಸುವ ಪಾಲಿಸ್ಟೈರೀನ್ [ಥರ್ಮಾಕೋಲ್].<br>(ಬಿ) ಪ್ಲಾಸ್ಟಿಕ್ ಪ್ಲೇಟ್‌ಗಳು, ಪ್ಲಾಸ್ಟಿಕ್ ಕಪ್‌ಗಳು ಮತ್ತು ಲೋಟಗಳು, ಫೋರ್ಕ್‌ಗಳು, ಪ್ಲಾಸ್ಟಿಕ್ ಚಮಚಗಳು, ಪ್ಲಾಸ್ಟಿಕ್ ಚಾಕುಗಳು, ಪ್ಲಾಸ್ಟಿಕ್ ಟ್ರೇಗಳಂತಹ ಕಟ್ಲರಿಗಳು, ಸ್ವೀಟ್ ಬಾಕ್ಸ್‌ಗಳ ಸುತ್ತ ಸುತ್ತುವ ಅಥವಾ ಪ್ಯಾಕಿಂಗ್ ಫಿಲ್ಮ್‌ಗಳು, ಆಮಂತ್ರಣ ಪತ್ರಗಳು ಮತ್ತು ಸಿಗರೇಟ್ ಪ್ಯಾಕೆಟ್‌ಗಳು, 100 ಮೈಕ್ರಾನ್‌ಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಅಥವಾ PVC ಬ್ಯಾನರ್‌ಗಳು, ಪ್ಲಾಸ್ಟಿಕ್ ಸ್ಟಿರರ್‌ಗಳು.</td>
</tr>
</table>
ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಹೊರಡಿಸಿದ ಮಾರ್ಗಸೂಚಿಯನ್ವಯ ವಿಧಿಸಲು ಕಲ್ಪಿಸಿರುವ Environmental Compensation ವಿವರಗಳು ಈ ಕೆಳಕಂಡಂತಿದೆ:–
<table>
<tr><th></th><th>ಉತ್ಪಾದಕರು (ಪ್ರತಿಟನ್‌ಗೆ) ರೂ.ಗಳಲ್ಲಿ</th><th>ತ್ಯಾಜ್ಯ ಉತ್ಪಾದಕರು ರೂ.ಗಳಲ್ಲಿ</th><th>ಸಗಟು ವ್ಯಾಪಾರಿಗಳು, ರೂ.ಗಳಲ್ಲಿ</th><th>ಬೀದಿ ವ್ಯಾಪಾರಿಗಳು ರೂ.ಗಳಲ್ಲಿ</th></tr>
<tr><td>ಮೊದಲ ಬಾರಿಗೆ</td><td>5000.00</td><td>500.00</td><td>2000.00</td><td>200.00</td></tr>
<tr><td>2ನೇ ಬಾರಿಗೆ</td><td>10000.00</td><td>1000.00</td><td>5000.00</td><td>500.00</td></tr>
<tr><td>3ನೇ ಬಾರಿಗೆ</td><td>20000.00</td><td>2000.00</td><td>10000.00</td><td>1000.00</td></tr>
</table>
ಈ ಕಾನೂನು ಜಾರಿಗೆ ತಂದ ದಿನಾಂಕದಿಂದ ಇಲ್ಲಿಯವರೆಗೂ ಸ್ಥಳೀಯ ಸಂಸ್ಥೆಗಳು ಸಲ್ಲಿಸಿರುವ ವರದಿಯ ಪ್ರಕಾರ ರೂ. 4.33 ಕೋಟಿಗಳಷ್ಟು ದಂಡವನ್ನು ವಸೂಲಿ ಮಾಡಲಾಗಿದೆ.
</td>
</tr>
<tr>
<td>ಈ)</td>
<td>ಪ್ಲಾಸ್ಟಿಕ್ ನಿಷೇಧದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td>
<td>
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಪ್ಲಾಸ್ಟಿಕ್ ನಿಷೇಧದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ರೇಡಿಯೋ, ದೂರದರ್ಶನ ಹಾಗೂ ದೈನಂದಿನ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆಗಳನ್ನು ನೀಡಲಾಗಿದೆ ಹಾಗೂ ಮೆಟ್ರೋ ಮತ್ತು ಮೆಟ್ರೋ ನಿಲ್ದಾಣಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ನಿಷೇಧದ ಕುರಿತು ಪ್ರಕಟಣೆಗಳನ್ನು ನೀಡಲಾಗಿರುತ್ತದೆ. ಪ್ರತಿ ಜಿಲ್ಲೆಗಳಲ್ಲಿ ಮಂಡಳಿಯ ಪ್ರಾದೇಶಿಕ ಅಧಿಕಾರಿಗಳ ಸಮ್ಮುಖದಲ್ಲಿ ಸಾರ್ವಜನಿಕರಿಗೆ, ಶಾಲಾ–ಕಾಲೇಜುಗಳು, ಮಾಲ್‌ಗಳು, ಸಗಟು ವ್ಯಾಪಾರಿಗಳು, ಬೀದಿಬದಿ ವ್ಯಾಪಾರಿಗಳು ಹಾಗೂ ಪ್ಲಾಸ್ಟಿಕ್ ಉತ್ಪಾದಕರಿಗೆ ಮತ್ತು ಕೈಗಾರಿಕಾ ಸಂಘ–ಸಂಸ್ಥೆಗಳಿಗೆ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.
ಪೌರಾಡಳಿತ ನಿರ್ದೇಶನಾಲಯವು ಪ್ಲಾಸ್ಟಿಕ್ ನಿಷೇಧದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕೈಗೊಂಡ ಕ್ರಮಗಳು:–
ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಸ್ಥಳೀಯವಾಗಿ ಲಭ್ಯವಿರುವ ಸರ್ಕಾರೇತರ ಸ್ವ–ಸಹಾಯ ಗುಂಪುಗಳ ಮೂಲಕ ಹಾಗೂ
</td>
</tr>
</table>

| | | |
|---|---|---|
| | | ಏಜೆನ್ಸಿಗಳ ಮೂಲಕ ಪ್ಲಾಸ್ಟಿಕ್ ನಿಷೇಧದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಬೀದಿ ನಾಟಕ, ಪೋಸ್ಟರ್, ಬ್ಯಾನರ್, ಕಟೌಟ್, ಭಿತ್ತಿ ಪತ್ರ, ಶಾಲಾ ಕಾಲೇಜುಗಳಲ್ಲಿ ಭಾಷಣ ಸ್ಪರ್ಧೆ, ಡ್ರಾಯಿಂಗ್, ಕ್ವಿಜ್ ಸ್ಪರ್ಧೆ, ಸ್ವ-ಸಹಾಯ ಗುಂಪುಗಳಿಗೆ ತಿಳುವಳಿಕೆ ಕಾರ್ಯಕ್ರಮ, ಪ್ರಮುಖ ಬೀದಿಗಳಲ್ಲಿ ಗೋಡೆ ಬರಹ, ಸ್ಥಳೀಯ ಸುದ್ದಿ ವಾಹಿನಿಗಳಲ್ಲಿ ಪ್ರಸಾರ ಕಾರ್ಯಕ್ರಮ, ಧ್ವನಿ ವರ್ಧಕಗಳ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸಿರುವ ಬಗ್ಗೆ, ಪರ್ಯಾಯ ವಸ್ತುಗಳ ಬಟ್ಟೆ ಬ್ಯಾಗ್ ಬಳಸುವುದರ ಕುರಿತು, ಸೆಣಬು ಹಾಗೂ ಇತರೆ ನೈಸರ್ಗಿಕವಾಗಿ ಲಭ್ಯವಿರುವ ವಸ್ತುಗಳ ಬಳಕೆ ಉತ್ತೇಜಿಸುವ ಕುರಿತು, ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ವಿವಿಧ ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ.<br>1. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಡಿಜಿಟಲ್ ಗೋಡೆ ಬರಹಗಳು, ಹೋರ್ಡಿಂಗ್‌ಗಳು ಅಳವಡಿಸಿ ಮತ್ತು "ಪ್ರಗತಿದರ್ಶನ" ಕಾರ್ಯಕ್ರಮದಡಿಯಲ್ಲಿ ಸಂಚಾರಿ ವಾಹನಕ್ಕೆ ಎಲ್.ಇ.ಡಿ ಟಿವಿಯನ್ನು ಅಳವಡಿಸಿ ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>2. ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ tri vision board, tin plate board, Kiosk ಗಳನ್ನು ಅಳವಡಿಸಲಾಗಿರುತ್ತದೆ.<br>3. ರಾಜ್ಯದ ಎಲ್ಲಾ ಚಲನಚಿತ್ರ ಮಂದಿರಗಳಲ್ಲಿ ಕಿರುಜಾಹೀರಾತು ಚಿತ್ರಗಳನ್ನು ಪ್ರಚಾರ ಪಡಿಸಲಾಗಿರುತ್ತದೆ.<br>4. Smart city ಯೋಜನೆ ಯಡಿಯಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ನಿರ್ಮಿಸಲಾದ Bus sheltersನಲ್ಲಿ ಜಾಹೀರಾತುಗಳನ್ನು ಅಳವಡಿಸಲಾಗಿದೆ. |
| ಉ) | ಹಾಲು, ಮೊಸರು, ಮಜ್ಜಿಗೆ, ಅಡುಗೆ ಎಣ್ಣೆ, ಶಾಂಪು ಬಾಟಲ್ ಮುಂತಾದ ಪಾಕೇಟ್ ಬಾಟಲ್‌ಗಳ ಮೇಲೆ ರೂ.5 ರಿಂದ 10 ಹೆಚ್ಚಿನ ಶುಲ್ಕ ವಿಧಿಸಿ ಉಪಯೋಗಿಸಿದ ಪಾಕೇಟ್ / ಬಾಟಲ್ ಹಿಂತಿರುಗಿಸಿದ ನಂತರ ಆ ಹೆಚ್ಚುವರಿ ಹಣ ಹಿಂತಿರುಗಿಸುವ ನಿಯಮ ಜಾರಿಗೆ ತರುವ ಪ್ರಸ್ತಾವ ಸರ್ಕಾರಧ ಮುಂದೆ ಇದೆಯೇ; ಹಾಗಿದ್ದಲ್ಲಿ, ಸದರಿ ನಿಯಮವನ್ನು ಯಾವ ಕಾಲಮಿತಿಯಲ್ಲಿ ಜಾರಿಗೆ ತರಲಾಗುವುದು? | ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಅಪಜೀ 202 ಇಎನ್‌ಜಿ 2022

(ಆನಂದ್ ಸಿಂಗ್)
ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ
ಪ್ರವಾಸೋದ್ಯಮ ಸಚಿವರು

Annexure- 1

## Plastic Waste Information

| SL. No. | Name of the District | No of ULBS | Quantity of Plastic waste Geerated per day (in tonnes) | No. of raids conducted (April-2021-March 2022) | Quantity of Plastic Collected during raids (TPD) (April-2021-March 2022) | No. of cases booked (April-2021-March 2022) | Fine amount collected during the raids (in Rs.) (April-2021-March 2022) | Total Quantity Supplied to Cement kilns (April-2021-March 2022) (in Tonnes) |
|---|---|---|---|---|---|---|---|---|
| 1 | Kalaburagi | 11 | 12.01 | 319 | 7.79 | 0 | 11950.00 | 407.06 |
| 2 | Chikkamagaluru | 10 | 0.899 | 59 | 0.798 | 0 | 8700.00 | 0.00 |
| 3 | Hassan | 8 | 13.06 | 131 | 38.37 | 0 | 126750.00 | 0.00 |
| 4 | Gadag | 9 | 2.18 | 118 | 2.99 | 0 | 29500.00 | 0.00 |
| 5 | Vijayanagara | 8 | 2.435 | 160 | 7.13 | 0 | 36200.00 | 6.05 |
| 6 | Belagavi | 38 | 11.8 | 289 | 24.44 | 0 | 439940.00 | 1.95 |
| 7 | Yadagiri | 8 | 0.292 | 151 | 1.986 | 0 | 26000.00 | 2.3 |
| 8 | Dhawad | 6 | 46.05 | 103 | 2.99 | 0 | 384500.00 | 31.5 |
| 9 | Chikkaballapura | 6 | 3.45 | 434 | 10.27 | 0 | 156800.00 | 0 |
| 10 | Chitradurga | 7 | 60.73 | 240 | 20.92 | 0 | 82307.00 | 45 |
| 11 | Koppal | 9 | 36.272 | 140 | 1384.84 | 0 | 54100.00 | 1183.30 |
| 12 | Shivamogga | 11 | 30.898 | 202 | 11.457 | 0 | 15300.00 | 54.00 |
| 13 | Ramnagar | 6 | 2.335 | 609 | 13.825 | 0 | 485158.00 | 11.95 |
| 14 | Ballari | 16 | 18.53 | 650 | 12.401 | 12 | 1521995.00 | 65272 |
| 15 | Haveri | 10 | 13.39 | 63 | 8.049 | 0 | 74500.00 | 0.45 |
| 16 | Davanagre | 7 | 14.26 | 178 | 504.01 | 0 | 39500.00 | 507.5 |
| 17 | Raichur | 13 | 4.622 | 250 | 27.493 | 0 | 83500.00 | 0 |
| 18 | Mysore | 9 | 144.75 | 312 | 61.0969 | 0 | 258689.05 | 0 |
| 19 | Kodagu | 4 | 2.045 | 99 | 0 | 0 | 41930.00 | 0 |
| 20 | Uttara Kannada | 13 | 12.47 | 243 | 244.207 | 0 | 77600.00 | 651.715 |
| 21 | Bijapur | 15 | 0.959 | 136 | 11.565 | 0 | 188900.00 | 6.2 |
| 22 | Bangalore urban | 8 | 317.42 | 149 | 1075.04 | 0 | 133800.00 | 0 |
| 23 | Bagalakote | 17 | 9.34 | 133 | 2.351 | 9 | 33850.00 | 1.925 |
| 24 | Bangalore Rural | 5 | 9.78 | 1959 | 3.7 | 0 | 2,10,000 | 8 |
| 25 | Ramanagar | 6 | 2.335 | 609 | 13.825 | 0 | 485158.00 | 11.95 |
| 26 | Tumkur | 11 | 3.42 | 169 | 3.87 | 0 | 209200.00 | 0 |
| 27 | Kolar | 6 | 34 | 938 | 703.78 | 0 | 203300.00 | 0 |
| 28 | Chamarajanagara | 5 | 2.856 | 92 | 1473 | 0 | 4000.00 | 0 |
| 29 | Dakshina kannada | 13 | 5.299 | 71 | 8.559 | 0 | 25300.00 | 37.73 |
| 30 | Udupi | 6 | 6.93 | 218 | 85.52 | 0 | 95800.00 | 315.345 |
| 31 | Bidar | 7 | 5.453 | 215 | 16.01 | 0 | 37600.00 | 5 |
| | Total | 308 | 830.26 | 9,439.00 | 5,782.28 | 21 | 53,71,827.05 | 68,560.93 |